ನಾಗರೀಕ ಹಕ್ಕು ಜಾರಿ ಘಟಕದವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ದಾಖಲು ಮಾಡಿರುವ ಬಗ್ಗೆ,

೨೨೭. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ),—ಮಾನ್ಯ ಸಮಾಜ ಕಲ್ಯಾಣ ಮತ್ತು ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಮಾಜ ಕಲ್ಯಾಣ ಇಲಾಖೆಯ ನಾಗರೀಕ ಹಕ್ಕು ಜಾರಿ ವಿಭಾಗವು ೧೯೯೦ ಜನವರಿಯಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೇಲೆ ನಡೆದಿರುವ ದೌರ್ಜನ್ಯಗಳ ಬಗ್ಗೆ ಎಷ್ಟು ಮೊಕದ್ದಮೆಗಳನ್ನು ನೋಂದಾಯಿಸಿರುತ್ತಾರೆ.

ಆ) ಅವುಗಳಲ್ಲಿ ಬೆಂಗಳೂರು ನಗರದಲ್ಲಿ ನೊಂದಾಯಿಸಲಾದ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು.)

ಅ) ದಿನಾಂಕ ೩೧-೮-೯೦ ರ ವರೆಗೆ ೨೨೭ ಪ್ರಕರಣಗಳನ್ನು ಸ್ಥಳೀಯ ಪೊಲೀಸರು ದಾಖಲು ಮಾಡಿದ್ದಾರೆ.

ಆ) ೩೧-೧೨-೯೦ ರ ವರಗೆ ದಾಖಲಾದ ಪ್ರಕರಣಗಳ ಸಂಖ್ಯೆ ೧೯.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ನಮ್ಮ ಕರ್ನಾಟಕ ರಾಜ್ಯದಲ್ಲಿ ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಇದೆ ಎಂಬುದೇ ಬಹಳ ಜನಕ್ಕೆ ಆದರಲ್ಲೂ ಎಸ್. ಸಿ. ಎಸ್. ಟಿ. ಜನಕ್ಕೆ ಗೊತ್ತಿಲ್ಲು. ಎಲ್ಲಾ ಡಿಸ್ಟ್ರಿಕ್‌ಗಳಲ್ಲೂ ಈ ಸೆಲ್ ಇದೆ. ಈ ಸೆಲ್‌ಗೆ ಕೇಸ್ ದಾಖಲೆ ಮಾಡಬೇಕೆಂದರೆ, ಮೊದಲು ಪೋಲೀಸ್‌ರ ಹತ್ತಿರ ಹೋಗಿ, ಪೋಲೀಸ್ ಕೇಸ್ ಅನ್ನು ಲಾಡ್ಜ್ ಮಾಡಬೇಕು. ನಂತರ ಅವರು ಅದನ್ನು ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್‌ಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ಬಹಳಷ್ಟು ದೌರ್ಜನ್ಯ ಮತ್ತು ಹಲ್ಲೆಗಳು ನಮ್ಮ ರಾಜ್ಯದ ಎಸ್. ಸಿ. ಎಸ್. ಟಿ. ಜನರ ಮೇಲೆ ನಡೆಯುತ್ತಾ ಇರುತ್ತದೆ. ಇದನ್ನು ನಾವು ಪತ್ರಿಕೆಗಳಲ್ಲಿ ಓದುತ್ತೇವೆ. ಆದರೂ ಇಡೀ ರಾಜ್ಯದಲ್ಲಿ ಈ ವರ್ಷದಲ್ಲಿ ಕೇವಲ ೨೨೭ ಕೇಸುಗಳನ್ನು ಮಾತ್ರ ಸಿ ಆರ್ ಇ ಸೆಲ್‌ಗೆ ಕಳುಹಿಸಿಕೊಟ್ಟಿದ್ದಾರೆ. ಇಡೀ ಬೆಂಗಳೂರು ಜಿಲ್ಲೆಗೆ ೧೯ ಕೇಸಸ್ ಮಾತ್ರ ಕಳುಹಿಸಿಕೊಟ್ಟಿದ್ದಾರೆ. ಇದು ಬಹಳ ಕಡಿಮೆ ಎಸ್. ಸಿ. ಎಸ್. ಟಿ. ಮೇಲೆ ದೌರ್ಜನ್ಯ ನಡೆಯುತ್ತಲೇ ಇರುತ್ತದೆ. ಆದರೆ ಪೋಲೀಸರು ಕೇಸ್‌ಗಳನ್ನು ಈ ಸೆಲ್‌ಗೆ ಟ್ರಾನ್ಸ್‌ಫರ್ ಮಾಡುವುದಿಲ್ಲ. ಸರ್ಕಾರದವರು ಅವರಿಗೆ ಸರಿಯಾಗಿ ಡೈರೆಕ್ಷನ್ ಕೊಟ್ಟಿದ್ದಾರೆಯೇ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).— ಅಧ್ಯಕ್ಷರೇ, ಸಿ ಆರ್ ಇ ಸೆಲ್ ೧೯೭೪ರಲ್ಲಿ ಪ್ರಾರಂಭವಾಯಿತು. ಮೊದಲು ಪೋಲೀಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಮಾಡಬೇಕಂ. ಆದಾದ ನಂತರ ಸಿ ಆರ್ ಇ ಸೆಲ್‌ನವರು ಇದರ ಮಾನಿಟರಿಂಗ್ ಮತ್ತು ಇನ್‌ವೆಸ್ಟಿಗೇಷನ್ ಮಾಡುತ್ತಾರೆ ಸಿ. ಆರ್. ಇ. ಸೆಲ್‌ನವರು ಡೈರೆಕ್ಟ್ ಆಗಿ ಕೇಸ್ ತೆಗೆದುಕೊಳ್ಳುವುದಕ್ಕೆ ಮತ್ತು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಬರುವುದಿಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ಬಂದಂಥ ಕೇಸ್‌ನ್ನು ಪ್ರೊಸೆಸ್ ಮಾಡಿ ಇಲ್ಲಿಗೆ ಕಳುಹಿಸಿಕೊಡುತ್ತಾರೆ. ಈ ರೀತಿ ಯಾವುದೇ ಮಾಹಿತಿ ನಿಮಗೆತಿ ಳಿದು ಬಂದರೆ ನನಗೆ ತಿಳಿಸಿದರೆ ಅದನ್ನು ನಾವು ವಿಚಾರ ಮಾಡಬಹುದು. ಸಿ ಆರ್ ಇ ಸೆಲ್ ಇರುವುದು ಬಹಳ ಜನಕ್ಕೆ ಗೊತ್ತಿದೆ. ಎಸ್.ಸಿ. ಜನಕ್ಕೂ ಗೊತ್ತಿದೆ. ಇದು ಬಹಳ ಪಾಪ್ಯುಲರ್ ಮೆಷರ್. ಗೌರ್ನಮೆಂಟ್ ಆಫ್ ಇಂಡಿಯಾದವರು ರೀಸೆಂಟ್ ಆಗಿ ಎಸ್. ಸಿ. ಎಸ್. ಟಿ. ಅಟ್ರಾಸಿಟೀಸ್ ಆಕ್ಟ್ ಲ್ ನ್ನು ಜಾರಿಗೆ ಕೊಟ್ಟಿದ್ದಾರೆ. ಸ್ಪೆಷಲ್ ಕೋರ್ಟ್ಸ್ ಮಾಡುವುದಕ್ಕೆ ಕೂಡಾ ಕರ್ನಾಟಕದ ಸರಕಾರದವರು ಒಪ್ಪಿಕೊಂಡಿದ್ದಾರೆ. ಆದಷ್ಟು ಬೇಗ ಎಸ್. ಸಿ. ಎಸ್. ಟಿ. ಜನರಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ಬಗ್ಗೆ ತಮ್ಮ ಹತ್ತಿರ ಏನಾದರೂ ಮಾಹಿತಿಗಳು ಇದ್ದರೆ, ಅದನ್ನು ನನಗೆ ಕೊಟ್ಟರೆ. ನೋಡಬಹುದು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ಸಿ ಆರ್ ಇ ಸೆಲ್‌ಗೆ ಸಾಕಷ್ಟು ಪವರ್ಸ್ ಕೊಡುತ್ತೀರಾ ? ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ನ ಎಲ್ಲಾ ಅಧಿಕಾರಿಗಳನ್ನು ಅಲ್ಲಿಗೆ ವರ್ಗಾವಣೆ ಮಾಡುತ್ತೀರಾ ಎಂದು ಮಾನ್ಯ ಮಂತ್ರಿಗಳು ದಯವಾಡಿ ತಿಳಿಸಬೇಕು.

ಶ್ರೀ ಬಿ. ಶಿವಣ್ಣ — ಮಾನ್ಯ ಅಧ್ಯಕ್ಷರೇ, ರಾಜ್ಯ ಮಟ್ಟದಲ್ಲಿ ಗೃಹ ಖಾತೆ ಕಾರ್ಯದರ್ಶಿ ಮತ್ತು ಆಯುಕ್ತರು ಈ ಕಮಿಟಿಯ ಅಧ್ಯಕ್ಷರಾಗಿರುತ್ತಾರೆ. ಅವರು ಪ್ರತಿ ತಿಂಗಳು ರಿವ್ಯೂ ಮಾಡುತ್ತಾರೆ. ಮತ್ತು ನಾನು ಅವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಹೆಚ್ಚು ರಕ್ಷಣೆ ಕೊಡ ಬೇಕೆಂದು ಆದೇಶ ಕೊಡುತ್ತೇನೆ.